RNU AIR DHARWAD

NOVEMBER 02, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಕೇಂದ್ರ ಸರ್ಕಾರ, ಕರ್ನಾಟಕಕ್ಕೆ 4 ಸಾವಿರದ 504 ಕೋಟಿ ರೂಪಾಯಿ, ಹೆಚ್ಚುವರಿ ತೆರಿಗೆ ಹಂಚಿಕೆ ಹಣ, ಬಿಡುಗಡೆ ಮಾಡಿದೆ. ನಿಯಮಿತ ಮಾಸಿಕ ಹಂಚಿಕೆಗಿಂತ, ಹೆಚ್ಚುವರಿಯಾಗಿದ್ದು, ಪ್ರಸಕ್ತ ಹಣಕಾಸು ವ ರ್ಷದಲ್ಲಿ, ಎರಡನೇ ಹೆಚ್ಚುವರಿ ಕಂತು, ಬಿಡುಗಡೆಯಾಗಿದೆ. ದೀಪಾವಳಿ ಹಬ್ಬದ ಋತುವಿನ ಹಿನ್ನೆಲೆ, ಬಂಡವಾಳ ವೆಚ್ಚ, ಅಭಿವೃದ್ಧಿ ಮತ್ತು ಕಲ್ಯಾಣ ವೆಚ್ಚಗಳಿಗೆ ಹಣಕಾಸು ಒದಗಿಸಲು, ರಾಜ್ಯಗಳಿಗೆ ಅನುವು ಮಾಡಿಕೊಡಲು, ಈ ಹಣವನ್ನು ಬಿಡುಗಡೆ ಮಾಡಲಾಗಿದೆ ಎಂದು, ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

<><><>

ಬೆಂಗಳೂರು, ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿತ, 71 ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ, ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಒಟ್ಟು 26 ವಿವಿಧ ಕ್ಷೇತ್ರಗಳ ಸಾಧಕರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳನ್ನು ಪ್ರದಾನಿಸಿದರು. ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲೂಕು, ಹಾಬಲಕಟ್ಟಿ ಗ್ರಾಮದ ಜಾನಪದ ಹಾಡುಗಾರ ದಾವಲಸಾಬ್ ಎಂ. ಅತ್ತಾರ ಪ್ರಶಸ್ತಿ ಸ್ವೀಕರಿಸಿದರು. ಉತ್ತರ ಕರ್ನಾಟಕ ಶೈಲಿಯ ಭಜನ ಪದಗಳು, ತತ್ವಪದಗಳು, ಶಿವಶರಣರ ಗೀತೆಗಳನ್ನು ಹಾಡುವ ದಾವಲಸಾಬ್, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ದಾವಲಸಾಬ್ ಎಂ. ಅತ್ತಾರ ಧ್ವನಿ– 41 ಸೆಕೆಂದುಗಳು

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ, 4 ಸಾವಿರ ಕಿಲೋಮೀಟರ ಬುಲೆಟ್ ರೈಲು ಮಾರ್ಗಗಳಿಗೆ ಅನುಮೋದನೆ ದೊರೆತಿದೆ. ಮೂರು ಸಾವಿರ ಕಿಲೋಮೀಟರ್ ಮಾರ್ಗಗಳು ಸಿದ್ಧತೆಯ ಹಂತದಲ್ಲಿವೆ ಎಂದು ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಬುಲೆಟ್ ರೈಲು ಯೋಜನೆ, ವಿಕಸಿತ ಭಾರತ ಕನಸಿನತ್ತ ದೊಡ್ಡ ಹೆಜ್ಜೆಯಾಗಿದೆ. ಈ ಯೋಜನೆ ಅತ್ಯಾಧುನಿಕ ಮೂಲಸೌಕರ್ಯ ಸಾರಿಗೆ ಸಂಪರ್ಕವನ್ನು ವೃದ್ಧಿಸಿ, ಪ್ರಯಾಣದ ಸಮಯ ತಗ್ಗಿಸಲಿದೆ ಹಾಗೂ ಆರ್ಥಿಕ ಪ್ರಗತಿಗೆ ಹೊಸ ವೇಗ ನೀಡಲಿದೆ ಎಂದು ತಿಳಿಸಿದ್ದಾರೆ.

<><><>

ಕೇಂದ್ರ ರೇಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರಿಂದ ಉದ್ಘಾಟನೆಗೊಂಡ, ದಕ್ಷಿಣ ಮಧ್ಯ ರೇಲ್ವೆ, ಬೆಂಗಳೂರು– ಮುಂಬೈ ನಡುವೆ ಸಂಚರಿಸುವ, ವಂದೇ ಭಾರತ ರೈಲು, ರೇಲ್ವೆ ಪ್ರಯಾಣಿಕರಿಗೆ ಆರಾಮದಾಯಕ, ಸುರಕ್ಷಿತ ಅನುಭವ ನೀಡಲಿದೆ ಎಂದು, ರಾಯಚೂರು ಕ್ಷೇತ್ರದ ಮಾಜಿ ಸಂಸದ ರಾಜಾ ಅಮರೇಶ್ವರ ನಾಯಕ ಹೇಳಿದರು.

<><><>

ನೂತನ ವಂದೇ ಭಾರತ ರೈಲಿಗೆ ಯಾದಗಿರಿ ರೇಲ್ವೆ ನಿಲ್ದಾಣದಲ್ಲಿ ನಿಲುಗಡೆ ಕಲ್ಪಿಸಬೇಕು ಎಂದು, ಶಾಸಕ ಚನ್ನಾರೆಡ್ಡಿ ಪಾಟೀಲ್ ರೇಲ್ವೆ ಇಲಾಖೆ ಅಧಿಕಾರಿಗಳಲ್ಲಿ ಆಗ್ರಹಿಸಿದರು.

<><><>

ಚಿತ್ರದುರ್ಗ ಜಿಲ್ಲೆ, ಹೊಸದುರ್ಗದ ಸಾಣೇಹಳ್ಳಿಯ, ಶಿವಕುಮಾರ ಬಯಲು ರಂಗಮಂದಿರದಲ್ಲಿ, 2026ನೇ ಸಾಲಿನ ರಾಷ್ಟ್ರೀಯ ನಾಟಕೋತ್ಸವ ಹಾಗೂ 'ಶಿವಸಂಚಾರ' ನಾಟಕ ಪ್ರದರ್ಶನಕ್ಕೆ ಸಂಸದ ಗೋವಿಂದ ಕಾರಜೋಳ ಚಾಲನೆ ನೀಡಿದರು. ನಾಡಿನಲ್ಲಿ ಕನ್ನಡ ಭಾ ೆ ಮತ್ತು ಸಂಸ್ಕೃತಿ ಉಳಿಯಲು 12ನೇ ಶತಮಾನದ ಶರಣರ ಕೊಡುಗೆ ಅಪಾರವಾಗಿದೆ ಎಂದರು.

<><><>

ಹವಾಮಾನ ವೈಪರೀತ್ಯದ ಕಾರಣದಿಂದ, ಮುಂಬರುವ ಬೇಸಿಗೆ, ಅವಧಿಯಲ್ಲಿ ಕುಡಿಯುವ ನೀರಿನ ಕೊರತೆ ಎದುರಾಗುವ ಸಾಧ್ಯತೆ ಇದೆ. ಈ ಹಿನ್ನೆಲೆ, ಸಾರ್ವಜನಿಕರಲ್ಲಿ ನೀರಿನ ಸದ್ಬಳಕೆ ಹಾಗೂ ಸಂರಕ್ಷಣೆ ಕುರಿತು ಅರಿವು ಮತ್ತು ಜಾಗೃತಿ ಮೂಡಿಸುವಂತೆ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಯು.ಟಿ. ಖಾದರ್ ಮಂಗಳೂರಿನಲ್ಲಿ, ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

<><><>

ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಇಂದು, ಎರಡನೇ ಕನ್ನಡ ವೈದ್ಯಕೀಯ ಸಾಹಿತ್ಯ ಸಮ್ಮೇಳನ –2026 ರ ಕಿರುಹೊತ್ತಿಗೆ ಹಾಗೂ ಲಾಂಛನವನ್ನು ಬಿಡುಗಡೆಗೊಳಿಸಲಿದ್ದಾರೆ.

<><><>

ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆ ಹಾಗೂ ಹಿರಿಯೂರು ವಿಧಾನಸಭಾ ಉಪ ಚುನಾವಣೆ ಹಿನ್ನೆಲೆ, ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ ಪಕ್ಷದ ಕಚೇರಿಯಲ್ಲಿ ಇಂದು ಮತ್ತು ನಾಳೆ ಕಾರ್ಯಕರ್ತರ ಸರಣಿ ಸಭೆ ನಡೆಸಲಿದ್ದಾರೆ.

<><><>

ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲೂಕು, ಕುದಾಪುರದಲ್ಲಿರುವ ಪ್ರತಿಷ್ಠಿತ ಭಾರತೀಯ ವಿಜ್ಞಾನ ಸಂಸ್ಥೆ (IISc) ಕ್ಯಾಂಪಸ್‌ಗೆ, ಇಂದು ಜಿಲ್ಲಾಧಿಕಾರಿ ರಮ್ಯಾ ಎಸ್. ಭೇಟಿ ನೀಡಿ ಪರಿಶೀಲನೆ ನಡೆಸಿದರು.ಸಂಸ್ಥೆಯಲ್ಲಿ ನಡೆಯುತ್ತಿರುವ ವಿವಿಧ ಸಂಶೋಧನಾ ಚಟುವಟಿಕೆಗಳು, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಅಭಿವೃದ್ಧಿ ಯೋಜನೆಗಳು ಹಾಗೂ ಸೌಲಭ್ಯಗಳ ಕುರಿತು ಸಂಸ್ಥೆಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಮಾಹಿತಿ ಪಡೆದುಕೊಂಡರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ **1** ಗಂಟೆ **10** ನಿಮಿಷಕ್ಕೆ

<><><>